**ದಿನಾಂಕ: 16.07.2022 ರಂದು ಬೆಳಿಗ್ಗೆ 11.30ಕ್ಕೆ ನೋಡಲ್ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ವಾರ್ಡ್–178 (ಸಾರಕ್ಕಿ) ನಡೆದ ಸಭೆಯ ನಡಾವಳಿಗಳು:**

## : ಚರ್ಚೆಯಾದ ವಿಷಯಗಳು :

1. ವಾಡ್–178ರಲ್ಲಿನ ಸಾರ್ವಜನಿಕರ ಎಲ್ಲಾ ರೀತಿಯ ಕುಂದುಕೊರತೆಗಳ ಬಗ್ಗೆ, ಅಭಿವೃದ್ಧಿ ಕಾಮಗಾರಿಗಳು ಹಾಗೂ ಘನತ್ಯಾಜ್ಯ ನಿರ್ವಹಣೆ ಮತ್ತು ಕೊವಿಡ್–19ರ ಬಗ್ಗೆ ಚರ್ಚಿಸುವ ಕುರಿತು.
2. ಅಧ್ಯಕ್ಷರ ಅಪ್ಪಣೆಯ ಮೇರೆಗೆ ಚರ್ಚಿಸುವಂತಹ ಇತರೆ ವಿಷಯಗಳು.

## : ಸಭೆಗೆ ಹಾಜರಾಗಿದ್ದವರ ವಿವರಗಳು :

| | |
|---|---|
| ಅಧ್ಯಕ್ಷರು | ನೋಡಲ್ ಅಧಿಕಾರಿ |
| ಸದಸ್ಯ ಕಾರ್ಯದರ್ಶಿ | ವಾರ್ಡ್ 178ರ ಸಹಾಯಕ ಅಭಿಯಂತರರು |
| ಸದಸ್ಯರುಗಳು | ಹಿರಿಯ /ಕಿರಿಯ ಆರೋಗ್ಯ ಪರಿವೀಕ್ಷಕರು |
| ಸದಸ್ಯರುಗಳು | ಬೆಸ್ಕಾಂ |
| ಸದಸ್ಯರುಗಳು | ತೋಟಗಾರಿಕಾ ಇಲಾಖೆಯ ಅಧಿಕಾರಿಗಳು |
| ಸದಸ್ಯರುಗಳು | ಅರಣ್ಯ ಇಲಾಖೆ ಅಧಿಕಾರಿಗಳು |
| ಸದಸ್ಯರುಗಳು | ಕಂದಾಯ ಪರಿವೀಕ್ಷಕರು |
| ಸದಸ್ಯರುಗಳು | ಬಿಡಬ್ಲ್ಯೂಎಸ್ಎಸ್‌ಬಿ ಅಧಿಕಾರಿಗಳು |
| ಸದಸ್ಯರುಗಳು | ಜೆ.ಪಿ.ನಗರ ಪೊಲೀಸ್ ಠಾಣಾ ಅಧಿಕಾರಿಗಳು |
| ಸದಸ್ಯರುಗಳು | ವಾರ್ಡ್ 178 ರ UPHC ನ ವೈದ್ಯರು |
| ಸದಸ್ಯರುಗಳು | ಜೆ.ಪಿ.ನಗರ 2ನೇ ಹಂತ ನಾಗರೀಕ ಕಲ್ಯಾಣ ಸಂಘದ ಸದಸ್ಯರು ಹಾಗೂ ನಾಗರೀಕರು |
| ಸಾರ್ವಜನಿಕರು | ಮಾರ್ಷಲ್ |

## :ನಡಾವಳಿಯ ವರದಿ:

➢ ಅಧ್ಯಕ್ಷರು ಮಾತನಾಡುತ್ತಾ ಹಿಂದಿನ ಸಭೆಯಲ್ಲಿ ಚರ್ಚೆಯಾದ ವಿಷಯಗಳ ಬಗ್ಗೆ ಅಧಿಕಾರಿಗಳು ಕೈಗೊಂಡ ಕ್ರಮಗಳ ಬಗ್ಗೆ ಚರ್ಚಿಸಲಾಯಿತು.

**ಸದರಿ ಸಭೆಯಲ್ಲಿ ಕಸ ವಿಲೇವಾರಿ ಸಮಸ್ಯೆ ಹಾಗೂ ಇತರೇ ದೂರುಗಳ ಬಗ್ಗೆ ಕುರಿತು ಈ ಕೆಳಕಂಡಂತೆ ಪ್ರಸ್ತಾಪಿಸಲಾಯಿತು.**

➢ 12ನೇ ಬಿ ಅಡ್ಡರಸ್ತೆ, 22ನೇ ಮುಖ್ಯರಸ್ತೆ, ಜೆ.ಪಿ.ನಗರ 2ನೇ ಹಂತದಲ್ಲಿ ಬಿಡಬ್ಲ್ಯೂಎಸ್ಎಸ್‌ಬಿ ಒಳಚರಂಡಿ ಪೈಪ್‌ಲೈನ್ ದುರಸ್ಥಿಗೊಂಡಿದ್ದು, ಅದನ್ನು ಕೂಡಲೇ ಸರಿಪಡಿಸುವಂತೆ ಸಹಾಯಕ ಅಭಿಯಂತರರವರಿಗೆ ಸಭೆಯಲ್ಲಿ ತಿಳಿಸಲಾಯಿತು ಹಾಗೂ ವಾರ್ಡ್ ವ್ಯಾಪ್ತಿಗೆ ಒಳಪಡುವ ಒಳಚರಂಡಿಗಳಲ್ಲಿ ಹೂಳೆತ್ತುವ ಕಾಮಗಾರಿಯನ್ನು ಯಾವ ರಸ್ತೆಯಲ್ಲಿ, ಯಾವ ದಿನದಂದು ಕ್ರಮ ಕೈಗೊಳ್ಳುವ ಬಗ್ಗೆ ಸಾರ್ವಜನಿಕರಿಗೆ ಮಾಹಿತಿಯನ್ನು ನೀಡುವಂತೆ ಕೋರಲಾಯಿತು.

**ಕ್ರಮ : ಸ.ಕಾ.ನಿ.ಅ.,ಬಿಡಬ್ಲ್ಯೂಎಸ್ಎಸ್‌ಬಿ**

➢ 15ನೇ ಅಡ್ಡರಸ್ತೆ, ಪುಟ್ಟೇನಹಳ್ಳಿ ಅಂಡರ್ ಪಾಸ್‌ನ ಸರ್ವಿಸ್ ರಸ್ತೆಯನ್ನು ದುರಸ್ಥಿಗೊಂಡಿದ್ದು, ವಾಹನ ಸವಾರರಿಗೆ ತೊಂದರೆಯಾಗುತ್ತಿದ್ದು, ಇದನ್ನು ಕೂಡಲೇ ಸರಿಪಡಿಸುವುದರ ಬಗ್ಗೆ ಚರ್ಚಿಸಲಾಯಿತು.

**ಕ್ರಮ : ಮೇಜರ್ ರೋಡ್**

- 1ನೇ ಅಡ್ಡರಸ್ತೆ ಹಾಗೂ 23ನೇ ಮುಖ್ಯರಸ್ತೆಯಲ್ಲಿರುವ ಟ್ರಾನ್ಸ್‌ಫಾರಮರ್ಸ್‌ನ ಸ್ವಚ್ಛತೆ ನಿರ್ವಹಣೆಯನ್ನು ಕೈಗೊಳ್ಳುವಂತೆ ಬೆಸ್ಕಾಂ ಸಿಬ್ಬಂದಿಯೊಂದಿಗೆ ಚರ್ಚಿಸಲಾಯಿತು ಹಾಗೂ ಹಳೆಯ ಟ್ರಾನ್ಸ್‌ಫಾರಮ್‌ಗಳನ್ನು ಸಿಂಗಲ್ ಪೋಲ್ ಟ್ರಾನ್ಸ್‌ಫಾರಮ್‌ಗಳಾಗಿ ಪರಿವರ್ತಿಸುವಾಗ ರಸ್ತೆಗಳಲ್ಲಿ ಗುಂಡಿಗಳನ್ನು ತೆಗೆದು ಅದನ್ನು ಮುಚ್ಚಿರುವುದಿಲ್ಲ ಹಾಗೂ ಈ ಸ್ಥಳಗಳಲ್ಲಿ ಬ್ಯಾರಿಕೇಡ್ ಅಥವಾ ಸುರಕ್ಷತೆಯನ್ನು ಕ್ರಮ ಕೈಗೊಳ್ಳುವುದರ ಬಗ್ಗೆ ಚರ್ಚಿಸಲಾಯಿತು.

**ಕ್ರಮ : ಸ.ಕಾ.ನಿ.ಅ., ಬೆಸ್ಕಾಂ ವಿಭಾಗ**

- 11ನೇ ಬಿ ಅಡ್ಡರಸ್ತೆಯಲ್ಲಿರುವ ಕ್ಲಾಪರ್ಸ್ ಪಾರ್ಕ್ ಒಳಗಡೆ ಬೆಂಚುಗಳು ದುರಸ್ಥಿಗೊಂಡಿದ್ದು, ಅದನ್ನು ಸರಿಪಡಿಸುವ ಬಗ್ಗೆ ಚರ್ಚಿಸಲಾಯಿತು.

**ಕ್ರಮ:-ಕಾ.ಪಾ.ಅ., ಯೋಜನೆ (ದಕ್ಷಿಣ)**

- ವಾರ್ಡ್ ಕಛೇರಿಯಲ್ಲಿ ಅಧಿಕಾರಿಗಳ ಹೆಸರು, ಪದನಾಮ, ಮೊಬೈಲ್ ಸಂಖ್ಯೆ, ಇಲಾಖೆ ಹೆಸರುಗಳಿರುವ ನಾಮಫಲಕವನ್ನು ಅಳವಡಿಸುವಂತೆ ಹಾಗೂ 10ನೇ ಅಡ್ಡರಸ್ತೆಯಲ್ಲಿ ಪಾದಚಾರಿ ಮಾರ್ಗವನ್ನು ಒತ್ತುವರಿ ಮಾಡಿಕೊಂಡಿರುವುದು ಹಾಗೂ ಸ್ವಚ್ಛತಾ ಕಾರ್ಯವನ್ನು ಕೈಗೊಳ್ಳುವಂತೆ ಸಭೆಯಲ್ಲಿ ಚರ್ಚಿಸಲಾಯಿತು.

**ಕ್ರಮ:-ಸ.ಕಾ.ನಿ.ಅ., ಜೆ.ಪಿ.ನಗರ ಉಪವಿಭಾಗ**

- ಜೆ.ಪಿ.ನಗರ ಉಪವಿಭಾಗ ಕಛೇರಿ ಹಾಗೂ ಧನ್ವಂತರಿ ಪಾರ್ಕ್ ಸುತ್ತಮುತ್ತಲಿನ ಪ್ರದೇಶವನ್ನು ಸ್ವಚ್ಛಗೊಳಿಸುವುದರ ಬಗ್ಗೆ ಹಾಗೂ 22ನೇ ಮುಖ್ಯರಸ್ತೆ, ಎಸ್.ಎಸ್. ಹೋಟೆಲ್‌ನ ಹಿಂಭಾಗದಲ್ಲಿ ಸೊಳ್ಳೆಗಳು ಜಾಸ್ತಿಯಾಗಿದ್ದು, ಕೂಡಲೇ ಸೊಳ್ಳೆ ಔಷಧಿ ಸಿಂಪಡಣೆಯನ್ನು ಮಾಡಿಸುವಂತೆ ಹಿರಿಯ ಆರೋಗ್ಯ ಪರಿವೀಕ್ಷಕರೊಂದಿಗೆ ಸಭೆಯಲ್ಲಿ ಚರ್ಚಿಸಲಾಯಿತು ಹಾಗೂ ವಾರ್ಡ್ 178ರ ವ್ಯಾಪ್ತಿಗೆ ಒಳಪಡುವ ಬೃಹತ್ ನೀರುಗಾಲುವೆ ನಿರ್ವಹಣೆ ಕಾಮಗಾರಿಗೆ ಸರ್ಕಾರದಿಂದ ಬಿಡುಗಡೆಯಾದ ಅನುದಾನದ ವಿವರಗಳನ್ನು ಮುಂದಿನ ಸಭೆಯಲ್ಲಿ ನೀಡುವಂತೆ ಕೋರಲಾಯಿತು.

**ಕ್ರಮ : ಸ.ಕಾ.ನಿ.ಅ. ಎಸ್.ಡಬ್ಲ್ಯೂ.ಎಂ.**

- 12ನೇ ಅಡ್ಡರಸ್ತೆ, 24ನೇ ಮುಖ್ಯರಸ್ತೆಯಲ್ಲಿರುವ ಕಂದಾಯ ಕಛೇರಿಯ ಹತ್ತಿರ ಅಶೋಕ ಮರ ಬಾಗಿದ್ದು, ಇದನ್ನು ಟ್ರಿಮ್ ಅಥವಾ ಕತ್ತರಿಸುವಂತೆ ಹಾಗೂ 23ನೇ ಮುಖ್ಯರಸ್ತೆ, 12ನೇ ಅಡ್ಡರಸ್ತೆಯಲ್ಲಿ ಕೆಳಗೆ ಬಿದ್ದಿರುವ ಮರದ ಕೊಂಬೆಗಳನ್ನು ತೆರವುಗೊಳಿಸುವಂತೆ ಸಭೆಯಲ್ಲಿ ಚರ್ಚಿಸಲಾಯಿತು.

**ಕ್ರಮ:- ಅರಣ್ಯ ಇಲಾಖೆ**

- 14ನೇ ಮುಖ್ಯರಸ್ತೆಯಲ್ಲಿ ಬೀದಿ ದೀಪಗಳು ದುರಸ್ಥಿಗೊಂಡಿದ್ದು, ಅದನ್ನು ಸರಿಪಡಿಸುವಂತೆ ಸಭೆಯಲ್ಲಿ ಚರ್ಚಿಸಲಾಯಿತು ಹಾಗೂ ವಾರ್ಡ್ ವ್ಯಾಪ್ತಿಯಲ್ಲಿರುವ ಎಲ್ಲಾ ಬೀದಿ ದೀಪದ ಕಂಬಗಳನ್ನು ಸರ್ವೇ ಮಾಡಿ, ಕಂಬಗಳಲ್ಲಿರುವ ವೈರ್‌ಗಳು ಓಪನ್ ಬಿಟ್ಟಿರುವುದನ್ನು ಕಂಡುಬಂದಲ್ಲಿ ಅಲ್ಲಿ ಸ್ವಿಚ್‌ಗಳನ್ನು ಅಳವಡಿಸುವಂತೆ ಹಾಗೂ ಎಲ್‌ಇಡಿ ಲೈಟ್‌ಗಳನ್ನು ಅಳವಡಿಸುವಂತೆ ವಾರ್ಡ್ 178 ರಲ್ಲಿ ಸಾರಕ್ಕಿ ವ್ಯಾಪ್ತಿಗೆ ಬೀದಿ ದೀಪಗಳ ನಿರ್ವಹಣೆಗೆ ನೀಡಿರುವ ಅನುದಾನದ ವಿವರಗಳನ್ನು ಮುಂದಿನ ಸಭೆಯಲ್ಲಿ ವರದಿಯನ್ನು ಸಲ್ಲಿಸಲು ತಿಳಿಸಲಾಯಿತು.

**ಕ್ರಮ : ಬೀದಿ ದೀಪ ನಿರ್ವಹಣೆ ವಿಭಾಗ**

➢ ಸಿಸಿಟಿವಿ ಕ್ಯಾಮರಾಗಳನ್ನು ಅಳವಡಿಸುವುದರ, ಯೋಜನೆ ಹಾಗೂ ಇದಕ್ಕಾಗಿ ಸರ್ಕಾರದಿಂದ ಅನುದಾನದ ವಿವರಗಳನ್ನು ಮುಂದಿನ ಸಭೆಯಲ್ಲಿ ವರದಿಯನ್ನು ಸಲ್ಲಿಸುವಂತೆ ಚರ್ಚಿಸಲಾಯಿತು ಹಾಗೂ ಸಿಸಿಟಿವಿ ಕ್ಯಾಮರಾಗಳನ್ನು ಎಲ್ಲೆಲ್ಲಿ ಅಳವಡಿಸಬೇಕೆಂಬುದರ ಸಲಹೆಗಳನ್ನು ಸಾರ್ವಜನಿಕರಿಂದ ಹಾಗೂ ವಾರ್ಡ್ ಕಮಿಟಿಯ ಸದಸ್ಯರಿಂದ ಪಡೆಯಬೇಕೆಂದು ಚರ್ಚಿಸಲಾಯಿತು.

**ಕ್ರಮ : ಜೆ.ಪಿ.ನಗರ ಪೊಲೀಸ್ ಠಾಣೆ**

➢ ಟ್ರಾಫಿಕ್ ನಿರ್ವಹಣೆಗಾಗಿ ವಾರ್ಡ್‌ಗಳಲ್ಲಿ ಪ್ರಮುಖ ಜಂಕ್ಷನ್‌ಗಳಲ್ಲಿ ನಿಯೋಜಿಸಬೇಕೆಂದು ಹಾಗೂ ವಾರ್ಡ್‌ನ ಪ್ರಮುಖ ರಸ್ತೆಗಳಲ್ಲಿ Even-Odd ಪಾರ್ಕಿಂಗ್ ಯೋಜನೆಗಳನ್ನು ವಾರ್ಡ್ ಕಮಿಟಿ ಸಭೆಯಲ್ಲಿ ತಿಳಿಸಲಾಯಿತು.

**ಕ್ರಮ : ಜಯನಗರ ಸಂಚಾರಿ ಪೊಲೀಸ್ ಠಾಣೆ**

➢ ಸ್ಪೀಡ್ ಬ್ರೇಕರ್, ಜೀಬ್ರಾ ಕ್ರಾಸಿಂಗ್ ಹಾಗೂ ರೋಡ್ ಸ್ಟಡ್ಸ್ ಗಳನ್ನು ವಾರ್ಡ್‌ನಲ್ಲಿ ಬೇಕಾದ ಸ್ಥಳಗಳಲ್ಲಿ ಅಳವಡಿಸಬೇಕೆಂದು ಸಭೆಯಲ್ಲಿ ಕೋರಲಾಯಿತು ಹಾಗೂ ಅದರ ಅನುದಾನದ ಬಗ್ಗೆ ವಿವರಗಳನ್ನು ನೀಡುವಂತೆ ತಿಳಿಸಲಾಯಿತು.

**ಕ್ರಮ : ಟ್ರಾಫಿಕ್ ಇಂಜಿನಿಯರಿಂಗ್ ಸೇಲ್**

➢ ಧನ್ವಂತರಿ ಪಾರ್ಕಿನ ಪಕ್ಕದಲ್ಲಿರುವ ಖಾಲಿ ಜಾಗದಲ್ಲಿ ನರ್ಸರಿ, ಟೆಂಟ್ ಹೌಸ್ ಹಾಗೂ ಕಟ್ಟಡದ ಸಾಮಗ್ರಿಗಳ ಮಾರಾಟದ ಚಟುವಟಿಕೆಗಳು ನಡೆಯುತ್ತಿರುವುದರಿಂದ ಈ ಖಾಲಿ ಜಾಗದ ಮಾಲೀಕತ್ವದ ಬಗ್ಗೆ ವಾರ್ಡ್ ಸಭೆಯಿಂದ ನೊಟೀಸ್ ಜಾರಿ ಮಾಡಿ ಮಾಹಿತಿಯನ್ನು ಪಡೆಯಲು ಸಭೆಯಲ್ಲಿ ಚರ್ಚಿಸಲಾಯಿತು.

**ಕ್ರಮ : ಕಂದಾಯ ಪರಿವೀಕ್ಷಕರು, ಸಾರಕ್ಕಿ ವಾರ್ಡ್ 178**

➢ ಕೊನೆಯದಾಗಿ ಮಾನ್ಯ ಅಧ್ಯಕ್ಷರು ಸಭೆಗೆ ಹಾಜರಾದ ಎಲ್ಲಾ ಸದಸ್ಯರು ಮತ್ತು ಸಾರ್ವಜನಿಕರಿಗೆ ವಂದನೆಯನ್ನು ತಿಳಿಸುತ್ತಾ ಇನ್ನು ಮುಂದೆ ಪ್ರತಿ ತಿಂಗಳು ಮೊದಲ ಶನಿವಾರ ಹಾಗೂ ಮೂರನೇ ಶನಿವಾರ ಬೆಳಿಗ್ಗೆ 11.30 ಕ್ಕೆ ಇದೇ ರೀತಿಯಾಗಿ ಮಾಸಿಕ 2 ಬಾರಿ ವಾರ್ಡ್ ಸಮಿತಿ ಸಭೆ ನಡೆಯುವುದಾಗಿ ತಿಳಿಸಿ ಮುಂದಿನ ಸಭೆಗಳಿಗೆ ಈ ವಾರ್ಡಿನ ವ್ಯಾಪ್ತಿಗೆ ಬರುವ ಎಲ್ಲಾ ಇಲಾಖೆಗಳ ಅಧಿಕಾರಿಗಳನ್ನು ಸದರಿ ಸಭೆಗೆ ಮಾಹಿತಿಗಳೊಂದಿಗೆ ಹಾಜರಾಗುವಂತೆ ಕೋರಿ ಪತ್ರ ಬರೆಯಲು ಸದಸ್ಯ ಕಾರ್ಯದರ್ಶಿ ರವರಿಗೆ ಸೂಚಿಸಿದರು. ಹಾಗೂ ಗೈರು ಹಾಜರಾಗಿರುವ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಲು ಮಾನ್ಯ ಆಯುಕ್ತರವರಿಗೆ ಸೂಚಿಸಲಾಗುವುದೆಂದು ತಿಳಿಸಿದರು.

➢ ಸದಸ್ಯ ಕಾರ್ಯದರ್ಶಿ ಹಾಗೂ ಸಹಾಯಕ ಇಂಜಿನಿಯರ್‌ರಾದ ಶ್ರೀ ಅಶ್ವತ್‌ರಾಮನ್ ಆರ್, ವಾರ್ಡ್ 178 ಸಾರಕ್ಕಿ, ಸಭೆಗೆ ಹಾಜರಾದ ಎಲ್ಲಾ ಸದಸ್ಯರಿಗೂ ಹಾಗೂ ಅಧಿಕಾರಿಗಳು/ನೌಕರರಿಗೂ ವಂದನಾರ್ಪಣೆ ಸಲ್ಲಿಸುವುದರೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸದಸ್ಯ ಕಾರ್ಯದರ್ಶಿ
**ಹಾಗೂ ವಾರ್ಡ್178 ರ ಸಹಾಯಕ ಅಭಿಯಂತರರು**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**